**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

<u>ಎಸ್ .ಸಿ. ನಂಃ **49/2023**</u>

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **03**
ಸಿ.ಡಬ್ಲ್ಯೂ ನಂಃ **05**
ಸಾಕ್ಷಿಯನ್ನು ದಿನಾಂಕಃ **11-02-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

| | | |
|---|---|---|
| ಸಾಕ್ಷಿದಾರನ ಹೆಸರು | : | ಲಕ್ಷ್ಮಣ |
| ತಂದೆಯ ಹೆಸರು | : | ಅಳ್ಳಪ್ಪ |
| ವಯಸ್ಸು | : | **40** ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಲಿಂಗನಬಂಡಿ |

<u>ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ</u>

ಈಗ ನನಗೆ ತೋರಿಸಿದ ನಿಪಿ **2** ದಾಖಲೆಯಲ್ಲಿ ನನ್ನ ಸಹಿ ಇದೆ. <u>ಸಾಕ್ಷಿದಾರರ ಸಹಿಯನ್ನು ನಿಪಿ **2**(ಬಿ) ಎಂದು</u> ಗುರುತಿಸಲಾಯಿತು. **03** ವರ್ಷಗಳ ಹಿಂದೆ ಕೊಪ್ಪಳದ ಕೆ ಎಸ್ ಆಸ್ಪತ್ರೆಯಲ್ಲಿ ಆ ಸಹಿಯನ್ನು ಮಾಡಿದ್ದೆ. ಪೊಲೀಸರು ನನ್ನನ್ನು ಸದರಿ ಆಸ್ಪತ್ರೆಯಲ್ಲಿ ಐಸಿಯು ಘಟಕದಲ್ಲಿ ದಾಖಲಾಗಿದ್ದ ಸುಮಂಗಲಾ ಎಂಬುವವರನ್ನು ಕರೆದುಕೊಂಡು ಹೋದರು. ಆಕೆಯ ಗಂಡ ಕುಡುಗೋಲಿನಿಂದ ಕಡಿದ ವಿಚಾರವನ್ನು ಆಕೆ ಪೊಲೀಸರಿಗೆ ಹೇಳಿದ್ದಳು. ಆಕೆ ಒಂದು ಹಳೆ ಚೀಲದಲ್ಲಿ ರಕ್ತತಾಗಿದ ಬಟ್ಟೆಗಳನ್ನು ತೋರಿಸಿದ್ದು, ಅವುಗಳನ್ನು ಪೊಲೀಸರು ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಹಾಕಿ ಮೊಹರು ಮಾಡಿ ನನ್ನ ಹಾಗೂ ಮಹದೇವಪ್ಪರವರ ಸಹಿಗಳನ್ನು ಒಂದು ಚೀಟಿಯ ಮೇಲೆ ಪಡೆದು ಸದರಿ ಪ್ಯಾಕೇಟ ಮೇಲೆ ಅಂಟಿಸಿದ್ದರು. ಆ ಚೀಲದಲ್ಲಿ ಒಂದು ಸೀರೆ ಮತ್ತು ಲಂಗ ಇದ್ದವು. ಅವುಗಳು ಗಿಳಿ ಹಸಿರು ಕೆಂಪು ಬಣ್ಣದ ಹೂವುಗಳಿರುವ ಸೀರೆ ಮತ್ತು ಗುಲಾಬಿ ಬಣ್ಣದ ಲಂಗ ಆಗಿದ್ದವು.

**2**). ಆಸ್ಪತ್ರೆಯಲ್ಲಿಯೇ ಲ್ಯಾಪಟಾಪನಲ್ಲಿ ಟೈಪ ಮಾಡಿ ಪ್ರಿಂಟ್ ತೆಗೆದು ಮಧ್ಯಾಹ್ನ **12-30** ರಿಂದ **2** ಗಂಟೆ ಮಧ್ಯ ನನ್ನ ಹಾಗೂ ಮಹದೇವಪ್ಪನವರ ಸಹಿ ಪಡೆದರು. ಪೊಲೀಸರು ಓದಿ ಹೇಳಿದ ನಂತರ ನಾನು ಸಹಿ ಮಾಡಿದ್ದೆ. ಆ ದಿನ ಪೊಲೀಸರು ವಶಪಡಿಸಿಕೊಂಡ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಟ್ಟೆಗಳು ನಾನು ಈಗ ನೋಡುತ್ತಿರುವ ಮುದ್ದೆಮಾಲು-**1** ಮತ್ತು **2** ಆಗಿರುತ್ತವೆ.

ನಾನು ಸಹಿ ಮಾಡಿರುವ ಚೀಟಿಗಳು ಸದರಿ ಬಟ್ಟೆಗಳನ್ನು ಇಟ್ಟಿರುವ ಬಟ್ಟೆ ಕವರಿನ ಮೇಲೆ ಅಂಟಿಸಲಾಗಿದೆ.

<u>ಪಾಟೀ ಸವಾಲು : ಆರೋಪಿಯ ಪರ ಸಿ ಎಲ್ ಎ ಡಿ ಸಿ</u>

**3).** ಪೊಲೀಸರು ನನಗೆ ಆ ದಿನ ಯಾವುದೇ ನೋಟೀಸು ಕೊಟ್ಟಿರಲಿಲ್ಲ. ಚಾಸಾ 1 ರಿಂದ 3 ನನಗೆ ಮೊದಲಿನಿಂದ ತುಂಬಾ ಪರಿಚಿತರು ಮತ್ತು ಬೇಕಾದವರು ಎಂದರೆ ಸರಿಯಲ್ಲ. ಚಾಸಾ 2 ಇದ್ದ ಐಸಿಯು ಕೊಠಡಿ ಸಂಖ್ಯೆ ಗೊತ್ತಿಲ್ಲ. ಮುದ್ದೆಮಾಲು-1 ಮತ್ತು 2 ಈ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಹಾಗೂ ನನ್ನ ಸಮಕ್ಷಮ ಆ ಬಟ್ಟೆಗಳನ್ನು ಪಂಚನಾಮೆ ಮೂಲಕ ಜಪ್ತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಪ್ರಕ್ರಿಯೆ ಸಮಯ ಪೊಲೀಸರು ಫೋಟೋಗಳನ್ನು ತೆಗೆದಿರಲಿಲ್ಲ. ಮಧ್ಯಾಹ್ನ 12-30 ಗಂಟೆ ನಂತರ ನಾನು ಪಂಚನಾಮೆಗೆ ಸಹಿ ಮಾಡಿದ್ದೆ. ಪಂಚನಾಮೆಯಲ್ಲಿ ಬರೆದ ವಿಚಾರ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

ಪ್ರಶ್ನೆಃ ಪಂಚನಾಮೆಗೆ ಸಹಿ ಮಾಡಲು ಪೊಲೀಸರು ಹೇಳಿದ ಕಾರಣ ನೀವು ಸಹಿ ಮಾಡಿದ್ದಿರಿ?

ಉತ್ತರಃ ನಾನು ಮೊದಲು ಸುಮಂಗಲಾರವರನ್ನು ಮಾತನಾಡಿಸಿಕೊಂಡು ಕೆಳಗೆ ಬಂದಿದ್ದು, ನಂತರ ಪೊಲೀಸರು ನನ್ನನ್ನು ಐಸಿಯು ಗೆ ಕರೆದುಕೊಂಡು ಹೋಗಿ ಅಲ್ಲಿ ಪಂಚನಾಮೆ ಮಾಡಿ ಸಹಿ ಪಡೆದರು.

**4).** ನಾನು ಹಾಗೂ ಚಾಸಾ 2 ಸುಮಂಗಲಾ ಕುಲಸ್ಥರು. ನನ್ನ ಸಮಕ್ಷಮ ಪೊಲೀಸರು ಪಂಚನಾಮೆ ಮಾಡದೇ ಇದ್ದರೂ ಚಾಸಾ 1 ಮತ್ತು 2 ರವರ ಮಾತು ಕೇಳಿ ಈ ದಿನ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ.